**ಆರ್.ಡಬ್ಲ್ಯೂ: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕ: 06-02-2026**

**ಸದ್ರಿ ಸಾಕ್ಷಿ ಹಾಜರಿಯನ್ನು ಅರ್ಜಿದಾರ ಮತ್ತು 2ನೇ ಎದ್ರುದಾರ ಸಮ್ಮತಿ ಮೇರೆಗೆ ವಿಸಿ ಮುಖಾಂತರ ಪಡೆದುಕೊಳ್ಳಲಾಗಿದೆ.**

**ಪಾಟೀಸವಾಲು:- ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದ ಸಂಬಂಧ ಆಪಾದಿತ ವಾಹನಕ್ಕೆ ದಿನಾಂಕ 22/01/2020 ರಂದು ವಿಮಾ ಪಾಲಸಿ ಪಡೆದುಕೊಳ್ಳಲಾಗಿದೆ ಎಂದರೆ ಸರಿ. ಸದ್ರಿ ವಿಮಾ ಪಾಲಿಸಿಯ ಅವಧಿ ದಿನಾಂಕ 21/01/2025 ರಂದು ಮುಕ್ತಾಯವಾಗುತ್ತದೆ ಎಂದರೆ, ಸಾಕ್ಷಿ ದಿನಾಂಕ 22/01/2020 ರಿಂದ 21/01/2021 ರವರೆಗೆ ಪ್ಯಾಕೇಜ ಪಾಲಿಸಿ ಇದ್ದು, ಅನಂತರ ಅವಧಿಯಲ್ಲಿ ಅಂದರೆ 21/01/2025 ರವರೆಗೆ ಥರ್ಡ ಪಾರ್ಟಿ ಪಾಲಿಸಿ ಇರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ವಿಮಾ ಪಾಲಿಸಿಯ ಮೊದಲನೆ ಅವಧಿಯಲ್ಲಿ ಓನ ಡ್ಯಾಮೇಜ ಮತ್ತು ಓನರ ಕಮ ರೈಡರ ಪರಿಹಾರ ಸಿಗುತ್ತದೆ ಎಂದರೆ ಸರಿ. ಸದ್ರಿ ಪಾಲಸಿಯ ಮೊದಲನೆ ಅವಧಿ ಮುಗಿದ ನಂತರ ವಿಮಾದಾರರಿಗೆ ನೋಟೀಸ ಕೊಟ್ಟಿರುವುದಿಲ್ಲ, ಆದರೆ ನಮ್ಮ ಕಂಪನಿಯಿಂದ ಪೋನ ಕರೆ ಮಾಡಿ ತಿಳಿಸಿರುತ್ತೇವೆ. ವಿಮಾದಾರರಿಗೆ ಪೋನ ಮಾಡಿ ವಿಷಯ ತಿಳಿಸಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. Pilion Rider, Third party risk ಕವರ ಆಗುತ್ತದೆ ಎಂದರೆ ಸರಿಯಲ್ಲ. ಓನ ಡ್ಯಾಮೇಜ ಪಾಲಿಸಿ ಎಂದರೆ ಸ್ವತಃ ವಾಹನಕ್ಕೆ ವಿಮಾ ಪರಿಹಾರ ಕೊಡುತ್ತೇವೆ ಎಂದರೆ ಸರಿ. ಪಿ.ಎ ವಿಮಾ ಪಾಲಿಸಿ ವಾಹನದ ಮಾಲೀಕ ಸ್ವತಃ ವಾಹನ ಚಾಲನೆ ಮಾಡಿ ಅಪಘಾತಡಕ್ಕಿಡಾಗಿ ಮರಣ ಮತ್ತು ಅಂಗನ್ಯೂನ್ಯತೆ ಆದಾಗ ವಿಮಾ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿ. ಈ ಪ್ರಕರಣದ ವಿಮಾ ಪಾಲಿಸಿಗೆ ಸಂಬಂಧಿಸಿದಂತೆ ವಿಮಾ ಪಾಲಿಸಿಯಲ್ಲಿ ಪಿಲೆನ ರೈಡರಗೆ ಷರತ್ತು ಅನ್ವಯ ಆಗುತ್ತದೆ ಎಂದು ಎಲ್ಲೂ ಹೇಳಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ನಿಯಮ ಇದೆ ಎಂದು ನುಡಿಯುತ್ತಾರೆ. ಈ ಪ್ರಕರಣದ ದಾಖಲಿಸಿದ ನಂತರ 1ನೇ ಎದ್ರುದಾರನಿಗೆ ನಮ್ಮ ಕಂಪನಿಯಿಂದ ಯಾವುದೇ ನೋಟಿಸ ಕೊಟ್ಟಿರುವುದಿಲ್ಲ. ಅದೇ ರೀತಿ 1ನೇ ಎದ್ರುದಾರನಿಂದ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿ. ನಾವು ವಿಮಾದಾರರಿಗೆ ನೀಡಿದ ವಿಮಾ ನಿಯಮದ ಪ್ರಕಾರ ಪಿಲೆನ ರೈಡರ/ಅರ್ಜಿದಾರನಿಗೆ

ನಮ್ಮ ಸಂಸ್ಥೆಯ ವತಿಯಿಂದ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. 1ನೇ ಎದ್ರುದಾರನ ಮಾಲಿಕೆಯ ವಾಹನದ ಚಾಲಕನಿಗೆ ಡಿ.ಎಲ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರದ್ರಿ ವಾಹನದ ಚಾಲಕನ ಡಿ.ಎಲ ಅವಧಿ ಮುಗಿದಿತ್ತು ಎಂದು ನುಡಿದಿರುತ್ತಾರೆ. 1ನೇ ಎದ್ರುದಾರನ ವಾಹನ ಚಾಲಕನ ಡಿ.ಎಲ ರದ್ದ ಆದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣದಲ್ಲಿ ನಾವು ಶಿವಮೊಗ್ಗ ಆರ.ಟಿ.ಓ ಅವರನ್ನು ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿ. 1ನೇ ಎದ್ರುದಾರನ ಚಾಲಕನಿಗೆ ಅಪಘಾತ ಆದ ದಿನ ಡಿ.ಎಲ ಇತ್ತು ಮತ್ತು ಆ ಅವಧಿಯಲ್ಲಿ ವಿಮಾ ಕಾನೂನು ಬದ್ಧವಾಗಿದ್ದರಿಂದ ನಾವು ಅರ್ಜಿದಾರನಿಗೆ ಪರಿಹಾರ ಕೊಡಲು ಬಾಧ್ಯಸ್ಥನಾಗಿರುತ್ತೇವೆ ಎಂದರೆ ಸರಿಯಲ್ಲ. ನಾವು ನೀಡಿದ ವಿಮಾ Third Party Cover ಆಗಿರುವುದರಿಂದ 2ನೇ ಎದ್ರುದಾರ pilion rider/ಅರ್ಜಿದಾರನಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಪರಿಹಾರ ಕೊಡಲು ತಪ್ಪಿಸುವುದಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆಂದರೆ ಸರಿಯಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**